ದಿನಾಂಕ: ಫೆಬ್ರವರಿ ೧೪, ೨೦೧೪

# ಸಂಸತ್ ಕೋಲಾಹಲ ಕಾಂಗ್ರೆಸ್ ಅಸಾಮರ್ಥ್ಯವನ್ನು ಬಿಂಬಿಸುತ್ತದೆ

ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಯುಪಿಎ ಆಳುವ ಇಚ್ಛಾಶಕ್ತಿಯನ್ನು ಕಳೆದುಕೊಂಡಿದೆ ಎಂದು ನಮ್ಮ ಅಭಿಮತವಾಗಿದೆ. ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವ ಮತ್ತು ಅನುಷ್ಠಾನಕ್ಕೆ ತರುವ ಸಾಮರ್ಥ್ಯದ ಕುರಿತು ಗಂಭೀರ ಸಂದೇಹಗಳು ಉದ್ಭವಿಸಿವೆ. ತೆಲಂಗಾಣ ರಾಜ್ಯ ಸೃಷ್ಟಿಸುವ ಪ್ರಸ್ತಾಪದಿಂದ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟು ನಿಭಾಯಿಸುವ ಯುಪಿಎ ಸರ್ಕಾರದ ಅಸಮರ್ಥತೆ ಬಿಂಬಿಸುತ್ತದೆ. ಕಾಂಗ್ರೆಸ್ ಪಕ್ಷವೇ ಮಧ್ಯದಲ್ಲಿ ಬಿರುಕು ಬಿಟ್ಟಿದೆ. ಆಂಧ್ರಪ್ರದೇಶದ ಅವರ ಸಂಸತ್ ಸದಸ್ಯರೆ ಸಂಸತ್ ಅಧಿವೇಶನ ನಡೆಯದ ರೀತಿ ಕೋಲಾಹಲ ಎಬ್ಬಿಸಿದ್ದಾರೆ. ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಡಲು ಸ್ವತಃ ಆ ಪಕ್ಷದ ಮುಖ್ಯ ಮಂತ್ರಿಗಳೇ ಪಣತೊಟ್ಟಿದ್ದಾರೆ.

ಲೋಕ ಸಭೆಯಲ್ಲಿ ಇಂದು ನಡೆದ ನಾಚಿಕೆಗೇಡಿನ ಘಟನೆಯಿಂದ ಭಾರತದ ಸಂಸದೀಯ ಪ್ರಜಾಪ್ರಭುತ್ವಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಸಂಸತ್ ಕಲಾಪಕ್ಕೆ ಅಡ್ಡಿ ಪಡಿಸಲು ಅಪಾಯಕಾರಿ ಮತ್ತು ನಿರ್ಬಂಧಿತ ಉಪಕರಣಗಳನ್ನು ಬಳಸಲಾಗಿದೆ. ಘಟನಾವಳಿಗಳ ವಿವರ ಸದಸ್ಯರಿಗೂ ಲಭ್ಯವಾಗಿಲ್ಲ. ಮತ್ತೊಂದೆಡೆ, ಭಾಜಪ, ಅದರ ಎಲ್ಲಾ ಸದಸ್ಯರು, ತೆಲಂಗಾಣ ಮತ್ತು ಸೀಮಾಂಧ್ರ ಭಾಗದ ಕಾರ್ಯಕರ್ತರು ಸರ್ವಾನುಮತದಿಂದ ಸೀಮಾಂಧ್ರಾ ಭಾಗದ ಜನರ ಪ್ರಾಮಾಣಿಕ ಆಶೋತ್ತರಗಳನ್ನು ಇಡೇರಿಸಿ, ತೆಲಂಗಾಣ ರಾಜ್ಯ ರಚಿಸುವ ನಿಲುವನ್ನು ಬೆಂಬಲಿಸಿವೆ. ಆದರೆ, ಯುಪಿಎ ಈ ವಿಚಾರದಲ್ಲಿ ಸಂಪೂರ್ಣವಾಗಿ ಸೋತಿರುವುದು ವಿಶಾದನೀಯ. ನಾವು ಎದುರಿಸುತ್ತಿರುವ ಬಿಕ್ಕಟ್ಟು ಅವರ ವೈಫಲ್ಯದ ಕೂಸಾಗಿದೆ. ಪರಿಸ್ಥಿತಿ ನಿಭಾಯಿಸುವಲ್ಲಿ ಎಡವಿದ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಒಂದೇ ಏಕಮಾತ್ರ ಹೊಣೆ ಹೊರಬೇಕಾಗಿದೆ. ಕಾಂಗ್ರೆಸ್ ನಾಯಕರು ಪರಿಪೂರ್ಣ ಸಿದ್ಧತೆ ನಡೆಸಿದ್ದರೆ ತಮ್ಮ ಸದ್ಯರನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗುತ್ತಿದ್ದರು ಹಾಗೂ ಉಪದ್ರವಕಾರಿ ರಂಗಭೂಮಿಕೆಯನ್ನು ತಪ್ಪಿಸಬಹುದಿತ್ತು.

*****